ಪಾವತಿಸಬೇಕಾಗಿದ್ದ ಲಾಭಾಂಶ ರೂ. 11.2.86 ಲಕ್ಷಗಳನ್ನು ಅಂತಹ ಸಹಕಾರ ಸಂಘಗಳಿಗೆ ಶೇರು ಬಂಡವಾಳವೆಂದು ಪರಿವರ್ತಿಸಿಕೊಂಡಿರುತ್ತದೆ.

ಈ) ಸಂಘಗಳಿಂದ ಶೇರು ಹಣವನ್ನು ಪರಿವರ್ತಿಸಿದ ಮೊತ್ತ ರೂ. 11.2.86 ಲಕ್ಷ ಇರುತ್ತದೆ.

ಉ) ಬಂದಿದೆ.

ರಾಜ್ಯದಲ್ಲಿರುವ ಗ್ರಾಮ ವ್ಯವಸಾಯ ಸೇವಾ ಸಹಕಾರ ಕೇಂದ್ರಗಳು

4669 (5203) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ವ್ಯವಸಾಯ ಸೇವಾ ಸಹಕಾರ ಸಂಘಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಆ) ದಿನಾಂಕ 1.3.2003ಕ್ಕೆ ಅನ್ವಯವಾಗುವಂತೆ ಎಷ್ಟು ಸೇವಾ ಸಹಕಾರ ಸಂಘಗಳು ಬ್ಯಾಂಕುಗಳಾಗಿ ಕೆಲಸ ಮಾಡುತ್ತಿವೆ?

ಇ) ಈ ಸಂಘ ಬ್ಯಾಂಕುಗಳು ದಿನಾಂಕ : 1.3.2003 ಕ್ಕೆ ಜಿಲ್ಲಾ ಸಹಕಾರ ಕೇಂದ್ರ ಬ್ಯಂಕುಗಳಿಗೆ ಕಟ್ಟಬೇಕಾದ ಸಾಲದ ಅಸಲು ಹಾಗೂ ಬಡ್ಡಿ ಎಷ್ಟು?

ಈ) ಈ ಸಂಘ ಬ್ಯಾಂಕುಗಳು 2002–03ನೇ ಸಾಲಿನಲ್ಲಿ ಲಾಭ ಗಳಿಸಿದ್ದು ಎಷ್ಟು? ಹಾನಿಗೊಳಗಾದ ಬ್ಯಾಂಕುಗಳು ಎಷ್ಟು?

ಉ) ನಷ್ಟದಲ್ಲಿರುವ ಈ ಬ್ಯಾಂಕು ಹಾಗೂ ಸಂಘಗಳ ಒಟ್ಟು ಹಾನಿ ದಿನಾಂಕ:1.3.2003ಕ್ಕೆ ಎಷ್ಟು?

ಊ) ಈ ಗ್ರಾಮಾಂತರ ಸಂಘ ಹಾಗೂ ಬ್ಯಾಂಕುಗಳು ಸಮರ್ಪಕವಾಗಿ ಕೆಲಸ ಮಾಡಲು ಸರ್ಕಾರದ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 4487 ಗ್ರಾಮ ವ್ಯವಸಾಯ ಸೇವಾ ಸಂಘಗಳಿವೆ. ಜಿಲ್ಲಾವಾರು ವಿವರ ಅನುಬಂಧ –1 ರಲ್ಲಿ ಲಗತ್ತಿಸಿದೆ.

ಆ) ದಿನಾಂಕ 31/3/2003 ಕ್ಕೆ ಅನ್ವಯವಾಗುವಂತೆ 3873 ಸೇವಾ ಸಹಕಾರ ಸಂಘಗಳು ಬ್ಯಾಂಕುಗಳಾಗಿ ಕೆಲಸ ಮಾಡುತ್ತಿದೆ.

ಇ) ಈ ಸಂಘ:ಬ್ಯಾಂಕುಗಳು ದಿನಾಂಕ : 31/03/2003ಕ್ಕೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ಕಟ್ಟಬೇಕಾದ ಸಾಲದ

ಅಸಲು –ರೂ. 2,104.36 ಕೋಟಿ

ಬಡ್ಡಿ –ರೂ. 261.65 ಕೋಟಿ

ಈ) 2002–03ನೇ ಸಾಲಿನಲ್ಲಿ 1885 ಸಂಘ ಬ್ಯಾಂಕುಗಳು ಲಾಭಗಳಿಸಿದ್ದು 2602 ಸಂಘ ಬ್ಯಾಂಕುಗಳು ಹಾನಿಗೊಳಗಾಗಿವೆ.

ಉ) ರೂ. 132.37 ಕೋಟಿ

ಊ) ಈ ಗ್ರಾಮ ಸೇವಾ ಸಂಘಗಳು ಮತ್ತು ಬ್ಯಾಂಕುಗಳು ಸಮರ್ಪಕವಾಗಿ ಕೆಲಸ ಮಾಡಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಗಗಳಲ್ಲಿ ವ್ಯಪಾರಾಭಿವೃದ್ಧಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದರಡಿಯಲ್ಲಿ ಗ್ರಾಮಾಂತರ ಪ್ರದೇಸಗಳ ಸಹಕಾರ ಸಂಘಗಳು ಠೇವಣಿ ಸಂಗ್ರಹಣೆ ಮಾಡಲು

ಮೂಲ ಭೂತ ಸೌಕರ್ಯಗಳಾದ ಬ್ಯಾಂಕಿಂಗ್ ಕೌಂಟರ್ ಮತ್ತು ತಿಜೋರಿ ಅಳವಡಿಕೆಗಳಾಗಿ ರೂ. 50,000/– ಗಳ ಸಹಾಯ ಧನವನ್ನು ನೀಡಲಾಗುತ್ತಿದೆ.

ಕೃಷಿಯೇತರ ಸಾಲ ನೀಡಿಕೆಗಾಗಿ ರೂ. 1.00 ಲಕ್ಷಗಳ ಬಡ್ಡಿ ರಹಿತ ಸಾಲದ ಆರ್ಥಿಕ ನೆವನ್ನು ನೀಡಲಾಗುತ್ತಿದೆ.

ಸಂಘದ ಬ್ಯಾಂಕುಗಳ ಕಾರ್ಯದರ್ಶಿ ವ್ಯವಸ್ಥಾಪಕರುಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಸಹ ನಡೆಸಲಾಗುತ್ತಿದೆ.

ಕ್ರಮ ಸಂಖ್ಯೆ	ಜಿಲ್ಲಾ ಬ್ಯಾಂಕುಗಳ ಹೆಸರು	ಸಹಕಾರ ಸಂಘಗಳ ಸಂಖ್ಯೆ
1.	ಬೆಂಗಳೂರು	228
2.	ಬಾಗಲಕೋಟೆ	187
3.	ಬೆಳಗಾಂ	548
4.	ಬಳ್ಳಾರಿ – ಹೊಸಪೇಟೆ	147
5.	ಬೀದರ್	171
6.	ಬಿಜಾಪುರ	223
7.	ಚಿಕ್ಕಮಗಳೂರು	113
8.	ಚಿತ್ರದುರ್ಗ	138
9.	ದಾವಣಗೆರೆ	182
10.	ಧಾರವಾಡ	526
11.	ಗುಲ್ಬರ್ಗಾ	220
12.	ಹಾಸನ	162
13.	ಕೋಲಾರ	224
14.	ಕೊಡಗು	68
15.	ಮಂಡ್ಯ	224
16.	ಮೈಸೂರು	234
17.	ಕೆನರಾ ಶಿರ್ಸಿ	163
18.	ರಾಯಚೂರು	177
19.	ಶಿವಮೊಗ್ಗ	155
20.	ದಕ್ಷಿಣ ಕನ್ನಡ	161
21.	ತುಮಕೂರು	236
	ಒಟ್ಟು	4487